
# ಬೆಳಕಿನ ಸಂಚಲನ

ಸಂಪುಟ 13, ಸಂಚಿಕೆ 3 | ದ್ವೈಮಾಸಿಕ ವಾರ್ತಾಪತ್ರ | ಮೇ–ಜೂನ್ 2025



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿ–ರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಸೆಪ್ಟೆಂಬರ್ 23, 2012)

**ಅನು: ಮಾಧವಿ ಚಲಪತಿ**

'ಯೋಗ'ದ ನಿಜವಾದ ಅರ್ಥವೇನು?

ಯೋಗವೆಂದರೆ ಪ್ರತಿಯೊಬ್ಬರ ಜೊತೆ ಮತ್ತು ಪ್ರತಿಯೊಂದರ ಜೊತೆ ಸಂಪೂರ್ಣವಾಗಿ ಸಾಮರಸ್ಯದಿಂದಿರುವುದು, ಮತ್ತು ವಿಶ್ವದೊಂದಿಗೆ ಶ್ರುತಿಗೊಳ್ಳುವುದು. ಯೋಗವೆಂದರೆ ವಿಸ್ತರಿಸಿದ ಪ್ರಜ್ಞೆಯಲ್ಲಿ (expanded awareness) ಬದುಕುವುದು.

ಯೋಗವೆಂದರೆ ಎಲ್ಲಾ ಜೀವರಾಶಿಗಳೊಂದಿಗೆ, ಎಲ್ಲಾ ಮಟ್ಟಗಳಲ್ಲಿ, ಮತ್ತು ಸಾಧ್ಯವಾದರೆ ಎಲ್ಲಾ ಸ್ತರಗಳಲ್ಲಿ ಹೊಂದಿಕೊಳ್ಳುವುದು. ಇದಲ್ಲದೆ, ಸೃಷ್ಟಿಯ ಉದ್ದೇಶದೊಂದಿಗೆ ಜತೆಗೂಡುವುದೂ ಕೂಡ ಆಗಿದೆ.

ಯೋಗವೆಂದರೆ ಅತ್ಯುನ್ನತ ಶ್ರೇಣಿಯ ಶರಣಾಗತಿಯಾಗಿದೆ. ನಿಜವಾದ ಯೋಗಿ ಈ ಲೋಕದ ಎಲ್ಲಾ ನಿಯಮಗಳನ್ನು ಹಾಗೂ ಯೋಗಿಗಳಿಗೆ ಅನ್ವಯಿಸುವ ಉನ್ನತ ನಿಯಮಗಳನ್ನು ಕೂಡ ಅನುಸರಿಸುತ್ತಾನೆ. ಅವನು ಉನ್ನತ ಉದ್ದೇಶಕ್ಕಾಗಿ ಕೆಲವು ನಿಯಮಗಳನ್ನು ಮುರಿಯಬಹುದಾದರೂ, ಅವನು ಹಾಗೆ ಮಾಡುವುದಿಲ್ಲ. ಯೋಗಿ ಎಂದರೆ ಗುರು.

ಯೋಗ ಕೇವಲ ವ್ಯಕ್ತಿಯ ವೈಯಕ್ತಿಕ ಸಾಧನೆಯಲ್ಲ. ಇದು ಯಾವಾಗಲೂ ಇತರರೊಂದಿಗೆ ಮತ್ತು ಹೊರಗಿನ ಜೀವನದೊಂದಿಗೆ ಬೆಸೆದುಕೊಂಡಿರುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಾವು ಹೊಸ ಯುಗದತ್ತ ನಿಜವಾಗಿಯೂ ಸಾಗುತ್ತಿದ್ದೇವೆಯೇ?, ಎಂದು ನಾವು ಕೆಲವೊಮ್ಮೆ ಆಶ್ಚರ್ಯ ಪಡಬಹುದು. ಆದರೆ ಹೊಸ ಯುಗದೆಡೆಗಿನ ನಮ್ಮ ಚಲನೆ ವಾಸ್ತವದ್ದಾಗಿದೆ. ಅದೇಗೋ, ನಕಾರಾತ್ಮಕ ಘಟನೆಗಳನ್ನು ಹೆಚ್ಚು ಪ್ರಮುಖವಾಗಿ ತೋರಿಸಲಾಗುತ್ತಿದೆ, ಮತ್ತು ಅನೇಕ ಅದ್ಭುತ ಬೆಳವಣಿಗೆಗಳನ್ನು ನಿರ್ಲಕ್ಷಿಸಲಾಗಿದೆ. ಉದಾಹರಣೆಗೆ, ಒಂದು ರೀತಿಯ ಪ್ರಜ್ಞೆಯಲ್ಲಿನ ಸ್ಥಿತ್ಯಂತರವನ್ನು ನಾವು ಗಮನಿಸಬಹುದು. ಆದರೆ ಅದು ಸಾಕಾಗದಿರಬಹುದು.

ಹೊಸಯುಗದೆಡೆಗೆ ವೇಗವಾಗಿ ಸಾಗಲು ನಾವು ಬೆಳಕಿನೊಂದಿಗೆ ಶ್ರುತಿಗೊಂಡು ಬದುಕಬೇಕು. ಈ ರೀತಿಯ ಬದುಕುವ ಪ್ರಕ್ರಿಯೆಯಲ್ಲಿ, ನಾವು ಅನೇಕ ವಿಷಯಗಳನ್ನು ನಿಭಾಯಿಸಬೇಕಾಗುತ್ತದೆ. ನಮ್ಮ ಎಲ್ಲಾ ವ್ಯವಹಾರಗಳು, ವರ್ತನೆಗಳು ಸತ್ಯ ಮತ್ತು ಪ್ರಾಮಾಣಿಕತೆಯನ್ನು ಆಧರಿಸಿರಲಿ. ನಾವು ಸಂಘರ್ಷದ ಬದಲು ಶಾಂತಿಯನ್ನು ಮತ್ತು ದ್ವೇಶದ ಬದಲು ಪ್ರೀತಿಯನ್ನು ಸುಲಭವಾಗಿ ಆಯ್ಕೆ ಮಾಡಿಕೊಳ್ಳಬಹುದು. ನಾವು ಈ ಆಯ್ಕೆಗಳನ್ನು ಮಾಡಿದಾಗ, ಮನುಕುಲದ ಹೊಸ ಯುಗದೆಡೆಗಿನ ಚಲನೆಯ ವೇಗವನ್ನು ಚುರುಕುಗೊಳಿಸುತ್ತೇವೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಮಾಧವಿ ಚಲಪತಿ**

ನಾವು ಸವಾಲುಗಳಿಂದ ಕೂಡಿದ ಕಾಲದಲ್ಲಿ ವಾಸಿಸುತ್ತಿದ್ದೇವೆ ಮತ್ತು ನಮ್ಮ ಜೀವನದಲ್ಲಿ ಹಿಂದೆಂದೂ ಕಂಡಿಲ್ಲದ ಘಟನೆಗಳನ್ನು ಎದುರಿಸುತ್ತಿದ್ದೇವೆ. ನಮ್ಮ ಎಲ್ಲಾ ಪ್ರಗತಿ, ಸಾಧನೆಗಳು ಮತ್ತು ಸೌಕರ್ಯಗಳ ಹೊರತಾಗಿಯೂ, ಅನಿಶ್ಚಿತತೆಯ ಭಾವನೆ ಇದೆ. ನಮ್ಮ ಕೆಲಸದ ಸ್ಥಳಗಳಲ್ಲಿ ಮತ್ತು ನಮ್ಮ ಸಂಬಂಧಗಳಲ್ಲಿ ದಿನದಿಂದ ದಿನಕ್ಕೆ ಒತ್ತಡ ಮತ್ತು ಆತಂಕ ಹೆಚ್ಚುತ್ತಿದೆ. ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಾಗದೆ ಅನೇಕ ಜನರು ಆಧ್ಯಾತ್ಮಿಕತೆಯತ್ತ ಮುಖ ಮಾಡುತ್ತಿದ್ದಾರೆ.

ಧ್ಯಾನದ ಅರಿವು ವಿಶ್ವದಾದ್ಯಂತ ಬೆಳೆಯುತ್ತಿರುವುದನ್ನು ನೋಡುವುದು ಹರ್ಷದ ಸಂಗತಿಯಾಗಿದೆ. ವಿಶ್ವಸಂಸ್ಥೆಯು ಡಿಸೆಂಬರ್ 21ಅನ್ನು 'ವಿಶ್ವ ಧ್ಯಾನ ದಿನ' ಎಂದು ಘೋಷಿಸಿರುವುದು ಒಂದು ಐತಿಹಾಸಿಕ ಕ್ರಮವಾಗಿದೆ. ಇದು ಹೊಸ ಯುಗದೆಡೆಗಿನ ಒಂದು ದೊಡ್ಡ ಹೆಜ್ಜೆ ಎಂದು ನಾನು ನಂಬುತ್ತೇನೆ. ಮುಂಬರುವ ವರ್ಷಗಳಲ್ಲಿ ಇದು ಹೆಚ್ಚಿನ ವೇಗವನ್ನು ಪಡೆಯುತ್ತದೆ ಎಂದು ನನಗೆ ವಿಶ್ವಾಸವಿದೆ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು–560077, ಭಾರತ.

ಫೋನ್: 99000 75280 (10am to 5pm), ಇ–ಮೇಲ್: info@lightagemasters.com

website: www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

ಅನು: ಕಾಂಚನಲತಾ

- ಜನರು ತಮ್ಮ ಅಹಂ ಮಟ್ಟದಿಂದ ಮಾತನಾಡುವಾಗ ಅಥವಾ ಸಂವಹನ ನಡೆಸುವಾಗ, ಅವರು ಚಿಕ್ಕ ಮಕ್ಕಳಂತೆ ಕಾಣುತ್ತಾರೆ. ಕೆಲವೊಮ್ಮೆ ಕೋಪ, ಕೆಲವೊಮ್ಮೆ ಹಠ. ಆದರೆ ಅವರು ಯಾವಾಗಲೂ ಮನರಂಜನೆ ನೀಡುತ್ತಾರೆ. ನಿಮ್ಮ ಮಕ್ಕಳೊಂದಿಗೆ ನೀವು ಏನು ಮಾಡುತ್ತೀರಿ? ಅವರನ್ನು ಪ್ರೀತಿಸಿ ಮತ್ತು ಅವರು ಬೆಳೆಯುವವರೆಗೂ ಕಾಯಿರಿ!
- ನಾವು ಅಪರಿಪೂರ್ಣರಾಗಿದ್ದು, ಪರಿಪೂರ್ಣತೆಯನ್ನು ಬಯಸಿದ್ದಕ್ಕಾಗಿ ಸಾಧನೆಯನ್ನು ಕೈಗೆತ್ತಿಕೊಂಡಿದ್ದೇವೆ ಎನ್ನುವುದನ್ನು ನಾವು ಮರೆಯಬಾರದು. ಒಬ್ಬ ಪರಿಪೂರ್ಣ ವ್ಯಕ್ತಿಗೆ ಪಾಠಗಳ ಅಗತ್ಯವಿಲ್ಲ!
- ಪ್ರತಿ ಹೊಸ ವರ್ಷವೂ ಹೊಸ ಚೈತನ್ಯಗಳನ್ನು ತರುತ್ತದೆ. ಈ ಚೈತನ್ಯಗಳು ಹೊಸ ಅರಿವನ್ನು ತರುತ್ತದೆ. ಈ ಹೊಸ ಅರಿವಿನೊಂದಿಗೆ ನಮ್ಮ ಪರಿಧಿಗಳ (horizons) ವ್ಯಾಪ್ತಿ ವಿಸ್ತಾರವಾಗುತ್ತದೆ ಮತ್ತು ನಾವು ಬೆಳೆಯುತ್ತೇವೆ. ಈ ಯುಗಾದಿಯು, ನವ ಚೈತನ್ಯಗಳನ್ನು ಮತ್ತು ನೂತನ ಅವಕಾಶಗಳನ್ನು ತರುತ್ತಿದೆ. ನಾವು ಈ ಅವಕಾಶಗಳ ಸದುಪಯೋಗ ಮಾಡಿಕೊಳ್ಳೋಣ ಮತ್ತು ಬೆಳೆಯೋಣ.
- ಆರಾಧಿಸಲ್ಪಡುವುದು (ಗುರುಗಳು) ಸುಲಭ, ಆದರೆ ಸಾಧಕರು ಆರಾಧನೆಯ ಹಂತದಲ್ಲಿ ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳುವುದು ಮತ್ತು ಅವರನ್ನು ಬೆಳಕಿನೊಂದಿಗೆ ಸೇರಲು ಮಾರ್ಗದರ್ಶನ ಮಾಡುವುದು ನಿಜವಾದ ಗುರುವಿನ ಕಾರ್ಯವಾಗಿದೆ.
- ನಾವು ಮಾನವ ಲೋಕದಲ್ಲಿ ಬದುಕುತ್ತಿದ್ದೇವೆ. ಮಾನವನಂತೆ ಇರುವುದು ಸಹಜ ಮತ್ತು ಆಧ್ಯಾತ್ಮಿಕ. ಈ ಭಾಗವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿಲ್ಲ. ಆಧ್ಯಾತ್ಮಿಕತೆ ಎಂದರೆ ಭಾವನೆ, ಮಮಕಾರ ಮತ್ತು ನಗು ಇಲ್ಲದಿರುವುದು ಎಂದು ನಂಬುವ ಮಾನಸಿಕ ಸ್ಥಿತಿಯಲ್ಲಿ ನಾವಿದ್ದೇವೆ. ಇದು ಸಂಪೂರ್ಣವಾಗಿ ತಪ್ಪು.
- ಪ್ರಳಯವು ತನ್ನದೇ ಆದ ಸೂಕ್ಷ್ಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಳೆಯ ಪದ್ಧತಿಗಳು ಮತ್ತು ನಂಬಿಕೆಗಳಲ್ಲಿ ನೆಲೆಸಿರುವ ಜೀವನದ ಜಡತ್ವವನ್ನು ಅಲುಗಾಡಿಸುವುದು ಮತ್ತು ಜಾಗೃತಗೊಳಿಸುವುದು ಪ್ರಳಯದ ಮುಖ್ಯ ಭಾಗವಾಗಿದೆ. ಪ್ರಳಯವನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಆದರೆ ಅದರ ಕಾರ್ಯವೈಖರಿಯನ್ನು ಗಮನಿಸುವುದು ಆಸಕ್ತಿದಾಯಕವಾಗಿದೆ.
- ನಾವು ಒಬ್ಬ ಗುರುವಿನೊಂದಿಗೆ ಸಂಪರ್ಕ ಹೊಂದಿದಾಗ, ಸಮಯ ಮತ್ತು ಅಂತರವು ಮಾಯವಾಗುತ್ತದೆ. ನಿಜವಾದ ಸಂಬಂಧಗಳು ಶಾಶ್ವತವಾಗಿ ಉಳಿದುಕೊಳ್ಳುತ್ತವೆ. ಹುಸಿಯಾದದ್ದು ಮಾಸುತ್ತವೆ.
- ಆರಾಧಿಸುವುದು ಪ್ರೀತಿ ಮತ್ತು ಗೌರವ ಸೂಚಿಸುವ ಒಂದು ಕ್ರಿಯೆ. ಗೌರವಾನ್ವಿತವಾಗಿ ಮತ್ತು ಪ್ರಜ್ಞಾವಂತಿಕೆಯಿಂದ ಬೋಧನೆಗಳನ್ನು ಮತ್ತು ಮಾರ್ಗದರ್ಶನಗಳನ್ನು ಅನುಸರಿಸುವ ಮೂಲಕ ಅದನ್ನು ಉತ್ತಮವಾಗಿ ವ್ಯಕ್ತಪಡಿಸಬಹುದಾಗಿದೆ. ಆರಾಧನೆಯು ಒಮ್ಮೆ ಮಾಡುವ ಪೂಜೆಯಲ್ಲ. ಆದರ್ಶವಾಗಿ ಜೀವಿಸಲು ಮಾಡುವ ಒಂದು ನಿರಂತರ ಪ್ರಯತ್ನ.
- ಬೆಳಕಿನ ಯುಗದ ಮುನ್ನ, ಈ ಭ್ರಷ್ಟಾಚಾರ ಮತ್ತು ಅಹಿಂಸೆಯ ಅವ್ಯವಸ್ಥೆಯು ಸ್ವಚ್ಛಗೊಳ್ಳಬೇಕು. ಅದಕ್ಕಾಗಿ, ನಾವು ಧ್ಯಾನ ಮಾಡಬೇಕು ಮತ್ತು ಬೆಳಕನ್ನು ಚಾನೆಲ್ ಮಾಡಬೇಕು.
- ನಾಗರಿಕತೆ ಮತ್ತು ಆಧ್ಯಾತ್ಮಿಕತೆಯ ನಡುವೆ ಯಾವುದೇ ವ್ಯತ್ಯಾಸವಿಲ್ಲ. ತಾಳ್ಮೆ, ಶಾಂತಿಯುತವಾದ ಭಿನ್ನಾಭಿಪ್ರಾಯಗಳು ಮತ್ತು ಚಳುವಳಿಗಳು ಹಾಗೂ ಇತರರ ಸ್ವಾತಂತ್ರ್ಯವನ್ನು ಗೌರವಿಸುವುದು ಇವೆಲ್ಲವುಗಳು ಒಂದು ಪ್ರಬುದ್ಧ ಪ್ರಜಾಪ್ರಭುತ್ವದ ಸಂಕೇತಗಳು. ಅವುಗಳು ಆಧ್ಯಾತ್ಮಿಕವಾಗಿವೆ.
- ನವ ಯುಗದ ಆಧ್ಯಾತ್ಮಿಕತೆಯು ಎಲ್ಲಾ ಗಡಿಗಳನ್ನೂ ತೆಗೆದು ಹಾಕುತ್ತದೆ ಮತ್ತು ಏಕತೆಯನ್ನು ತರುತ್ತದೆ.

– ಗುರೂಜಿ ಕೃಷ್ಣಾನಂದ



ಬೆಂಗಳೂರಿನ ರಾಮಮೂರ್ತಿ ನಗರದಲ್ಲಿರುವ ಶಾಲೆಯೊಂದರ ಮುಖ್ಯೋಪಾಧ್ಯಾಯರು ಫೆಬ್ರುವರಿ 21, 2025ರಂದು ಪೋಷಕರು ಹಾಗೂ ಶಿಕ್ಷರುಗಳ ಮೀಟಿಂಗ್‌ನಲ್ಲಿ ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಿದರು.



ಕೇರಳದ ಕ್ಯಾಲಿಕಟ್‌ನಲ್ಲಿರುವ ಶಾಲೆಯೊಂದರ ವಿದ್ಯಾರ್ಥಿಗಳು ಮಾರ್ಚ್ 1, 2025ರಂದು ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿದರು.



ಬೆಂಗಳೂರಿನ ಶಾಲೆಯೊಂದರ ವಿದ್ಯಾರ್ಥಿಗಳು ಫೆಬ್ರುವರಿ 1, 2025ರಂದು ಲೈಟ್ ಚಾನಲ್ ಮಾಡಿದರು

## ಯಶಸ್ಸು ಮತ್ತು ವೈಫಲ್ಯ

**ಮನೋಜ್ ಚೋಪ್ರಾ; ಅನು: ಕಾಂಚನಲತಾ**

ಜೀವನವು ಒಂದು ಸಂಘರ್ಷವಾಗಿದೆ ಮತ್ತು ಪ್ರತಿಯೊಬ್ಬರೂ ಗೆಲ್ಲಲು ಶ್ರಮಿಸುತ್ತಾರೆ. ಜೀವನವು ಒಂದು ಸ್ಪರ್ಧೆಯಾಗಿದೆ ಮತ್ತು ಬದುಕುಳಿಯಲು, ಪ್ರತಿ ಹಂತದಲ್ಲೂ ಗೆಲ್ಲುವುದು ಅತ್ಯಗತ್ಯ ಎಂದು ನಂಬುವುದಕ್ಕೆ ನಮಗೆ ಬಾಲ್ಯದಿಂದಲೂ ಮಾನಸಿಕ ಸಿದ್ಧತೆಯಾಗಿದೆ. ನಮ್ಮ ಸಮಾಜದಲ್ಲಿ, ಯಶಸ್ಸು ಹೆಚ್ಚು ಮೆಚ್ಚುಗೆ ಮತ್ತು ಗೌರವವನ್ನು ಪಡೆಯುತ್ತದೆ ಆದರೆ ವೈಫಲ್ಯವು ಸಾಮಾನ್ಯವಾಗಿ ವ್ಯಕ್ತಿಯೊಬ್ಬನನ್ನು ನಿರ್ಣಯಿಸಲು ಅಥವಾ ಕೀಳಾಗಿ ನೋಡಲು ಕಾರಣವಾಗುತ್ತದೆ.

ನಮ್ಮಲ್ಲಿ ಪ್ರತಿಯೊಬ್ಬರೂ ಅನನ್ಯ ಮತ್ತು ವಿಶೇಷ ಎಂದು ನಾನು ನಂಬುತ್ತೇನೆ ಮತ್ತು ಯಾರನ್ನೂ ಅವರ ಯಶಸ್ಸು ಅಥವಾ ವೈಫಲ್ಯದ ಆಧಾರದ ಮೇಲೆ ನಿರ್ಣಯಿಸಬಾರದು. ಯಶಸ್ಸು ಮತ್ತು ವೈಫಲ್ಯ ಒಂದೇ ನಾಣ್ಯದ ಎರಡು ಮುಖಗಳು. ಒಬ್ಬ ಪ್ರಸಿದ್ಧ ವಿಜ್ಞಾನಿಯು ಒಮ್ಮೆ ಬಹಳ ಸುಂದರವಾಗಿ ಹೀಗೆ ಹೇಳಿದ್ದಾರೆ, “ವೈಫಲ್ಯವು ಪ್ರಗತಿಯಲ್ಲಿರುವ ಯಶಸ್ಸು.”

ಯಶಸ್ಸು ಮತ್ತು ವೈಫಲ್ಯಗಳನ್ನು ಅರ್ಥಮಾಡಿಕೊಳ್ಳಲು ನಾವು ಜೀವನದ ಕೆಲವು ವಾಸ್ತವತೆಗಳನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಈ ಅದ್ಭುತವಾದ ಜಗತ್ತಿನಲ್ಲಿ ಜೀವನವನ್ನು ಅನುಭವಿಸಲು ಮತ್ತು ಆಚರಿಸಲು ಜನ್ಮ ತಾಳಿದ್ದೇವೆ. ಅಸಂಖ್ಯಾತ ಅವಕಾಶಗಳನ್ನು ಅನ್ವೇಷಿಸಲು ಇದು ಒಂದು ಸುಂದರವಾದ ಸ್ಥಳವಾಗಿದ್ದರೂ, ಇದು ಕೆಲವು ನಿಯಮಗಳಿಗೆ ಒಳಪಟ್ಟಿರುತ್ತದೆ. ಹಗಲು ಮತ್ತು ರಾತ್ರಿ ಇದ್ದಂತೆ, ಯಶಸ್ಸು ಮತ್ತು ವೈಫಲ್ಯಗಳು ಭೂಮಿಯ ಮೇಲಿನ ಜೀವನದ ಒಂದು ಸ್ವಾಭಾವಿಕವಾದ ವಿಷಯವಾಗಿದೆ. ದೇವರು ನಮಗೆ ತೊಂದರೆಗಳನ್ನು ಉಂಟುಮಾಡಲು ವೈಫಲ್ಯಗಳನ್ನು ನೀಡುವುದಿಲ್ಲ; ಬದಲಿಗೆ ಪ್ರತಿ ವೈಫಲ್ಯವು ಬೆಳೆಯಲು ಮತ್ತು ಪ್ರಕಾಶಿಸಲು ಒಂದು ಅವಕಾಶವಾಗಿದೆ. ನಾವು ಕಷ್ಟ ಪಟ್ಟಾಗ ಬೆಳೆಯುತ್ತೇವೆ ಮತ್ತು ಉನ್ನತವಾದವುಗಳನ್ನು ಸಾಧಿಸುತ್ತೇವೆ.

ಸರಳವಾಗಿ, ಯಶಸ್ಸು ಎಂದರೆ ಒಂದು ನಿರ್ದಿಷ್ಟ ಮೈಲುಗಲ್ಲನ್ನು ನಾವು ತಲುಪಿದ್ದೇವೆ ಎಂದರ್ಥ. ಮತ್ತೊಂದೆಡೆ, ವೈಫಲ್ಯ ಎಂದರೆ ನಾವು ಇನ್ನೂ ಆ ಹಂತವನ್ನು ತಲುಪಿಲ್ಲ ಎಂದರ್ಥ ಅಷ್ಟೆ. ಇದು ನಮ್ಮ ಯೋಗ್ಯತೆಯ ಅಥವಾ ನಮ್ಮ ಸಾಮರ್ಥ್ಯದ ಕುರಿತಾದ ತೀರ್ಪು ಅಲ್ಲ. ಯಶಸ್ಸು ಅಥವಾ ವೈಫಲ್ಯವು ವ್ಯಕ್ತಿಗತವಾದುದು ಎಂಬುದನ್ನು ಅರಿಯುವುದೂ ಸಹ ಮುಖ್ಯವಾಗಿದೆ. ಒಬ್ಬ ವ್ಯಕ್ತಿಗೆ ಯಶಸ್ಸು ಎನಿಸಿಕೊಂಡದ್ದು ಮತ್ತೊಬ್ಬ ವ್ಯಕ್ತಿಗೆ ವೈಫಲ್ಯವಾಗಿ ಕಾಣಿಸಬಹುದು – ಮತ್ತು ಪ್ರತಿಕ್ರಮವಾಗಿಯೂ (vice versa) ಇರಬಹುದು.

ಕೆಲವೊಮ್ಮೆ ವೈಫಲ್ಯ ನಮಗೆ ಯಶಸ್ಸಿಗಿಂತ ಹೆಚ್ಚಿನದನ್ನು ಕಲಿಸುತ್ತದೆ. ಅದು ನಮ್ಮನ್ನು ವಿನಮ್ರರನ್ನಾಗಿಸುತ್ತದೆ ಮತ್ತು ನಮ್ಮ ನ್ಯೂನತೆಗಳನ್ನು ನಮಗೆ ತಿಳಿಸುತ್ತದೆ. ವೈಫಲ್ಯವು ಸಮಸ್ಯೆಯನ್ನು ಉನ್ನತ ದೃಷ್ಟಿಕೋನದಿಂದ ನೋಡಲು ಸಹ ನಮಗೆ ಸಹಾಯ ಮಾಡುತ್ತದೆ. ನಮ್ಮ ಕನಸುಗಳು ದೊಡ್ಡಮಟ್ಟದ ಕಾರಣಕ್ಕಾಗಿದ್ದರೆ, ನಮಗೆ ಹೆಚ್ಚು ವೈಫಲ್ಯಗಳು ಸಿಗುವ ಸಾಧ್ಯತೆಗಳಿರುತ್ತದೆ. ಆದರೆ ‘ಪ್ರತಿ ಪತನವೂ ನಾವು ಇನ್ನೂ ಎಷ್ಟು ಎತ್ತರಕ್ಕೆ ಹಾರಬೇಕು ಎಂಬುದರ ಮಾನದಂಡವಾಗಿದೆ’ ಎಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಯಶಸ್ಸು ನಮ್ಮಲ್ಲಿ ಒಂದು ಬಗೆಯ ತೃಪ್ತಿ ಮತ್ತು ಇನ್ನೂ ದೊಡ್ಡದಾಗಿ ಕನಸು ಕಾಣಲು ಆತ್ಮವಿಶ್ವಾಸವನ್ನು ತರುತ್ತದೆ. ಲೈಟ್ ಚಾನೆಲಿಂಗ್‌ನಂತಹ ಅಭ್ಯಾಸವು ನಮ್ಮ ಅಂತರಾಳದಲ್ಲಿರುವ ಅಡಚಣೆಗಳನ್ನು ತೆರವು ಮಾಡಲು ಸಹಾಯ ಮಾಡುತ್ತದೆ ಮತ್ತು ನಮ್ಮ ಗುರಿಗಳನ್ನು ಸಾಧಿಸುವತ್ತ ಮಾರ್ಗದರ್ಶನ ನೀಡುತ್ತದೆ. ಇದು ನಮ್ಮ ವೈಫಲ್ಯಗಳನ್ನು ಎದುರಿಸಲು ನಮಗೆ ಶಕ್ತಿಯನ್ನು ನೀಡುತ್ತದೆ ಮತ್ತು ಉತ್ತಮ ಉತ್ಸಾಹದಿಂದ ಮುಂದುವರಿಯಲು ನಮ್ಮ ಶಕ್ತಿಯನ್ನು ನವೀಕರಿಸುತ್ತದೆ. ಸಮತೋಲನದ ಜೀವನವನ್ನು ನಡೆಸಲು ನಮಗೆ ಸಾಕಷ್ಟು ವಿವೇಕವನ್ನು ತಂದುಕೊಡುತ್ತದೆ, ಇದು ಯಶಸ್ವಿ ಜೀವನಕ್ಕೆ ಅತ್ಯಂತ ಪ್ರಮುಖ ಅಂಶವಾಗಿದೆ. ಲೈಟ್ ಚಾನೆಲಿಂಗ್ ನಮ್ಮ ಮಾನಸಿಕ ಸ್ವಸ್ಥತೆಯನ್ನು ಪೋಷಣೆ ಮಾಡುವುದು ಮಾತ್ರವಲ್ಲದೆ ನಮ್ಮ ದೈಹಿಕ ಸ್ವಾಸ್ಥ್ಯಕ್ಕೂ, ಸಮಗ್ರ ಬೆಳವಣಿಗೆಗೂ ಮತ್ತು ಸಾಮರಸ್ಯದ ಬದುಕಿಗೂ ಕೊಡುಗೆ ನೀಡುತ್ತದೆ.

ನಾವು ಯಶಸ್ಸು ಮತ್ತು ವೈಫಲ್ಯಗಳನ್ನು ಮೀರಿ ಹೋಗಲು ಕಲಿಯಬೇಕು ಎಂದು ನಾನು ನಂಬುತ್ತೇನೆ. ಇವೆರಡರಿಂದಲೂ ಅತಿಯಾದ ಪ್ರಭಾವಕ್ಕೊಳಗಾಗಬಾರದು ಏಕೆಂದರೆ ಇವೆರಡೂ ತಾತ್ಕಾಲಿಕ ಹಾಗೂ ನಿರಂತರವಾಗಿ ಬದಲಾಗುವಂಥವುಗಳು. ನನ್ನ ಅಭಿಪ್ರಾಯದಲ್ಲಿ, ನಮ್ಮೊಳಗಿರುವ ಜೀವಶಕ್ತಿಯನ್ನು ಪ್ರಕಟಗೊಳಿಸಲು ಮತ್ತು ಆಂತರಿಕ ಆನಂದವನ್ನು ಅನುಭವಿಸಲು ಸಾಧ್ಯವಾದಾಗ ನಿಜವಾದ ಯಶಸ್ಸು ಬರುತ್ತದೆ. ಲೈಟ್ ಚಾನೆಲಿಂಗ್ ಮತ್ತು ಧ್ಯಾನದಂತಹ ಅಭ್ಯಾಸಗಳು ನಮಗೆ ಈ ಉನ್ನತ ಸ್ಥಿತಿಗೆ ಮಾರ್ಗದರ್ಶನ ನೀಡುತ್ತವೆ. ಯಶಸ್ಸು ಮತ್ತು ವೈಫಲ್ಯದ ದ್ವಂದ್ವಗಳನ್ನು ಮೀರಲು ಅವು ನಮಗೆ ಸಹಾಯ ಮಾಡುತ್ತವೆ, ನಮ್ಮ ನಿಜವಾದ ಮೂಲತತ್ವದೊಂದಿಗೆ ಸಂಪರ್ಕ ಸಾಧಿಸಲು ಹಾಗೂ ಹೆಚ್ಚಿನ ಶಾಂತಿ, ಉನ್ನತ ಉದ್ದೇಶ ಮತ್ತು ಆನಂದದೊಂದಿಗೆ ಜೀವಿಸಲು ಅನುವು ಮಾಡಿಕೊಡುತ್ತವೆ. ■

### ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸು–ವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

### ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 6175 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 30.98 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : | 508 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : | 2.21 ಲಕ್ಷ |

**ಮಾರ್ಗದರ್ಶಿತ ಆನ್‌ಲೈನ್ ಲೈಟ್ ಚಾನೆಲಿಂಗ್ ಸೆಷನ್**


ತಿಂಗಳ ಪ್ರತಿ ಮೂರನೇ ಭಾನುವಾರದಂದು ಬೆಳಿಗ್ಗೆ 11ರಿಂದ 11.30ರವರೆಗೆ ನಡೆಯುತ್ತದೆ. ಇದು ಪ್ರತಿಯೊಬ್ಬರಿಗೂ ಲಭ್ಯವಿರುತ್ತದೆ.

ಇದನ್ನು ಈ ಕೆಳಗಿನ ಲಿಂಕ್ ಮೂಲಕ ಪಡೆಯಬಹುದು:

www.lightagemasters.com

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## 15ನೇ ವಿಶ್ವ ಚಾನಲ್ಸ್ ದಿನದ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ವಿದ್ಯಾರ್ಥಿನಿಯೊಬ್ಬಳ ಕೆನ್ನೆಯ ಮೇಲೆ ಕಣ್ಣೀರಿನ ಧಾರೆ ಹರಿಯುತ್ತಿತ್ತು ಹಾಗಾಗಿ ಲೈಟ್ ಚಾನೆಲ್ ಸೆಷನ್ ಮುಗಿದ ನಂತರ ನಾನು ಅವಳನ್ನು ಸಂದರ್ಶಿಸಿದೆ ಎಂದು ಮುಸ್ಕಾನ್ ಎನ್‌ಜಿಒ (NGO)ದ ಟ್ರಸ್ಟಿಯೊಬ್ಬರು ಹಂಚಿಕೊಂಡರು. ಆ ಹುಡುಗಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದು ಲೈಟ್ ಚಾನೆಲ್ ಮಾಡುವಾಗ ಅವಳಿಗೆ ಹಗುರವೆನಿಸಿತು ಎಂದು ಹೇಳಿದಳು. ಅವಳು ಹೊತ್ತಿದ್ದ ಎಲ್ಲಾ ಭಾರವೂ ಈಗ ಪೂರ್ತಿಯಾಗಿ ಬಿಡುಗಡೆಯಾದಂತೆ ಅವಳಿಗೆ ಅನಿಸಿತು. ಜೊತೆಗೆ ಪ್ರಶಾಂತತೆಯ ಮತ್ತು ಸಾಂತ್ವನದ ಅನುಭವವೂ ಆಯಿತು ಹಾಗೂ ಈ ಅನುಭವವು ಜೀವನದ ಅತಿದೊಡ್ಡ ಸಂತೋಷವೆಂದು ನಂತರ ಅವಳಿಗೆ ಅರಿವಾಯಿತು. ತದನಂತರ, ಅವಳು ಮಂದಹಾಸ ಬೀರಿದಳು. ಈ ಎನ್‌ಜಿಒನಲ್ಲಿ ಓದುತ್ತಿರುವ ಸೌಲಭ್ಯ ವಂಚಿತ ಮಕ್ಕಳಲ್ಲಿ ಅವಳು ಒಬ್ಬಳಾಗಿದ್ದಾಳೆ.

ಅವಳ ಈ ಅನುಭವ ನನ್ನನ್ನು ಆಳವಾಗಿ ಮುಟ್ಟಿತು, ನನ್ನ ಕಣ್ಣುಗಳಿಂದ ಕಣ್ಣೀರು ಹರಿಯಿತು ಮತ್ತು ನನಗೂ ಕೂಡ ಅತ್ಯಂತ ಸಂತೋಷವಾಯಿತು. ಈ ಸಂತೋಷ ಒಂದು ಮಿಲಿಯನ್ ಮಕ್ಕಳಿಗೆ ಸೇವೆ ಮಾಡಿದ ನಂತರ ಸಿಗುವ ಸಂತೋಷಕ್ಕೆ ಸಮ ಎಂದು ನಾನು ಭಾವಿಸುತ್ತೇನೆ.

– ಆಲ್ಕಾ ಸಿಂಗ್,
ಲೈಟ್ ಚಾನೆಲ್ ಕಾರ್ಯಕರ್ತೆ

ವಿಶ್ವ ಚಾನೆಲ್ಸ್ ದಿನದಂದು ನಾನು ಎರಡು ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ನಿರ್ವಹಿಸಿದೆ. ಮೊದಲನೆಯದು ಬೆಂಗಳೂರಿನ ಟಿಸಿ ಪಾಳ್ಯದಲ್ಲಿರುವ ವಾಗ್ದೇವಿ ವಿಲಾಸ್ ಸ್ಕೂಲ್‌ನಲ್ಲಿ ನಡೆಯಿತು. ನಾನು ವಿದ್ಯಾರ್ಥಿಗಳ ಜೊತೆ ಲೈಟ್ ಚಾನೆಲ್ ಮಾಡುತ್ತಿರುವಾಗ, ಈ ವಿದ್ಯಾರ್ಥಿಗಳು ಬೆಳಕನ್ನು ಚಾನೆಲ್ ಮಾಡುತ್ತಿರುವುದು ಮಾತ್ರವಲ್ಲದೆ ಬೇರೆ ಶಾಲೆಯ ಅನೇಕ ವಿದ್ಯಾರ್ಥಿಗಳೂ ಕೂಡ ಚಾನಲ್ ಮಾಡುತ್ತಿರುವಂತೆ ಅನಿಸಿತು. ಅಲ್ಲಿ ಸಮೃದ್ಧವಾದ ಬೆಳಕಿತ್ತು, ಮತ್ತು ನಾನು ಆ ಬೆಳಕಿನ ಜೊತೆ ಒಂದಾದ ಭಾವ ಉಂಟಾಯಿತು. ಅದು ವಿಶೇಷವಾಗಿತ್ತು ಮತ್ತು ಸ್ಮರಣೀಯ ಅನುಭವವಾಗಿತ್ತು. ಸೆಷನ್ ಮುಗಿದ ನಂತರ, ಶಿಕ್ಷಕಿಯೊಬ್ಬರು ನಿಯತವಾಗಿ ಲೈಟ್ ಚಾನೆಲ್ ಮಾಡುತ್ತಿದ್ದು ಚಾನೆಲ್ ಮಾಡಿದ ನಂತರ ಅವರು ತುಂಬಾ ಶಾಂತಿ ಮತ್ತು ಸಮಾಧಾನವಾಗಿರುತ್ತಾರೆ ಎಂದು ನನಗೆ ಹೇಳಿದರು.

ನನ್ನ ಎರಡನೆಯ ಸೆಷನ್ ಬೆಂಗಳೂರಿನ ವೈಟ್ ಫೀಲ್ಡ್‌ನಲ್ಲಿರುವ ಬಿ.ಐ.ಎ.ನಲ್ಲಿ 1 ರಿಂದ 4ನೇ ತರಗತಿಯ ವಿದ್ಯಾರ್ಥಿಗಳಿಗೆ ನಡೆಸಲಾಯಿತು. ಮಕ್ಕಳು ಒಟ್ಟಿಗೆ ಸಿದ್ಧರಾಗಲು ಸಮಯವನ್ನು ತೆಗೆದುಕೊಂಡರು. ಅವರು ಹಾಗೆ ಸುತ್ತಲೂ ಓಡುತ್ತಿದ್ದರು, ಮತ್ತು ಶಿಕ್ಷಕರು ಅವರ ಹಿಂದೆ ಓಡುತ್ತಿದ್ದರು. ಈ ಮಕ್ಕಳು ಲೈಟ್ ಚಾನೆಲಿಂಗ್ ಬಗ್ಗೆ ಅರ್ಥ ಮಾಡಿಕೊಳ್ಳಲು ತುಂಬಾ ಚಿಕ್ಕವರಲ್ಲವೇ ಎಂದು ನಾನು ಯೋಚಿಸುತ್ತಿದ್ದೆ. ಆದರೆ, ಒಮ್ಮೆ ಸೆಷನ್ ಶುರುವಾದಾಗ, ಎಲ್ಲರು ಮೌನವಾದರು. ಅವರು ಶ್ರದ್ಧೆಯಿಂದ ನಾನು ಹೇಳುವುದನ್ನೆಲ್ಲವನ್ನು ಕೇಳಿಸಿಕೊಂಡರು ಮತ್ತು ಆಶ್ಚರ್ಯಕರ ಸಂಗತಿ ಎಂದರೆ ನಂತರ ಕೇಳಿದ ಪ್ರಶ್ನೆಗಳಿಗೆ ಅವರು ಸರಿಯಾದ ಉತ್ತರಗಳನ್ನು ಕೂಡ ಕೊಟ್ಟರು. ಅವರೆಲ್ಲರೂ ಸೂಚನೆಗಳನ್ನು ಅನುಸರಿಸಿದರು ಹಾಗೂ ತುಂಬಾ ಪ್ರಾಮಾಣಿಕವಾಗಿ ಅಭ್ಯಾಸ ಮಾಡಿದರು. ಸೆಷನ್‌ಗೆ ಮುಂಚೆ ಯಾವ ಶಿಕ್ಷಕರು ಮಕ್ಕಳನ್ನು ಕೂಡಿಸಲು ಪದೇಪದೇ ಸೂಚನೆಗಳನ್ನು ಕೊಡುತ್ತಿದ್ದರೋ ಅವರು ಸೆಷನ್ ನಡೆಯುವಾಗ ಏನನ್ನೂ ಹೇಳುವ ಅವಶ್ಯಕತೆ ಇರಲಿಲ್ಲ. ಈ ಅದ್ಭುತವಾದ ಅವಕಾಶ ನೀಡಿದ ಮಾನಸ ಕುಟುಂಬಕ್ಕೆ ಮತ್ತು ಋಷಿಗಳಿಗೆ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ.

– ವರುಣ್‌ಸಾಯಿ ಮಂಚಿಕಂಟಿ,
ಲೈಟ್ ಚಾನೆಲ್ ಕಾರ್ಯಕರ್ತ

ಶುಕ್ರವಾರ ಬೆಳಗ್ಗೆ, ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಇರುವ ಕೇಂದ್ರಿಯ ವಿದ್ಯಾಲಯದಲ್ಲಿ ನಾನು ಲೈಟ್ ಚಾನೆಲಿಂಗ್ ಸೆಷನ್ ಪ್ರಾರಂಭಿಸಿದ ತಕ್ಷಣ, ಬೆಳಕು ಸೆಷನ್‌ಅನ್ನು ವಹಿಸಿಕೊಂಡಂತೆ ನನಗೆ ಅನ್ನಿಸಿತು ಏಕೆಂದರೆ ಪದಗಳು ಸರಾಗವಾಗಿ ಬರತೊಡಗಿದವು ಮತ್ತು ಅದು ನನ್ನ ಚೇತನವನ್ನು ಇನ್ನೂ ಹೆಚ್ಚು ಉತ್ಸಾಹಗೊಳಿಸಿತು. ಸೆಷನ್ ನಂತರ ಒಬ್ಬ ವಿದ್ಯಾರ್ಥಿ ತನ್ನ ಅನುಭವವನ್ನು ಹಂಚಿಕೊಂಡನು. ಈ ಪ್ರಪಂಚ ಮಾತ್ರವಲ್ಲದೆ ಬೇರೆ ಗ್ರಹಗಳು ಮತ್ತು ತಾರಾಗಣಗಳೆಲ್ಲವೂ ಕೂಡ ಪ್ರೀತಿ ಮತ್ತು ಶಾಂತಿಯಿಂದ ತುಂಬಿದ್ದವು ಎಂದು ಹೇಳಿದನು.

ಮುಂದಿನ ಸೆಷನ್ ಸ್ಟೆಲ್ಲಾ ಮೇರಿಸ್ ಸ್ಕೂಲ್‌ನಲ್ಲಿ ನಡೆಯುತ್ತಿರುವಾಗ, ವಿದ್ಯಾರ್ಥಿಗಳು ಲೈಟ್ ಚಾನೆಲಿಂಗ್ ಮಾಡುತ್ತಿರುವಾಗ, ಅವರು ಬೆಳಕಿನಲ್ಲಿ ಲೀನರಾಗಿರುವಂತೆ ನನಗೆ ಅನಿಸಿತು. ಪ್ರಶಾಂತತೆ ಮತ್ತು ದೈವಿಕ ಉಪಸ್ಥಿತಿಯ ಅನುಭವವಾಯಿತು. ಮಕ್ಕಳ ಮುಖದಲ್ಲಿ ಶಾಂತತೆಯ ಭಾವನೆ ಪ್ರತಿಬಿಂಬಿಸುತ್ತಿತ್ತು.

ಇಡೀ ದಿನ ಪ್ರೀತಿ ಮತ್ತು ಶಾಂತಿಯಿಂದ ಕಂಪಿಸುತ್ತಿತ್ತು. ಈ ಎಲ್ಲ ಅದ್ಭುತವಾದ ಅನುಭವಗಳಿಗಾಗಿ ನಾನು ಋಷಿಗಳಿಗೆ, ಗುರೂಜಿಯವರಿಗೆ ಮತ್ತು ಬೆಳಕಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– ಸುಜಾತ ರಾಮ್ ರಾವ್,
ಲೈಟ್ ಚಾನೆಲ್ ಕಾರ್ಯಕರ್ತೆ

ಈ ವರ್ಷದ ವಿಶ್ವ ಚಾನೆಲ್ಸ್ ದಿನ ಅದ್ಭುತವಾಗಿತ್ತು! ಈ ಘಟನೆ (ವಿಶ್ವ ಚಾನೆಲ್ಸ್ ದಿನ) ನಡೆದ ಕೆಲವು ದಿನಗಳ ನಂತರವೂ ಕೂಡ ಬೆಳಕಿನ ಪರಿಣಾಮ ಇತ್ತೆಂದು ನನಗೆ ಅನಿಸಿತು. ಮುಂದಿನ ಕೆಲವು ದಿನ ನಾನು ಉದ್ರೇಕಗೊಳ್ಳದೆ ಪ್ರಶಾಂತವಾಗಿದ್ದೆ ಮತ್ತು ನನ್ನ ಮನಸ್ಸು ನಿಶ್ಚಲವಾಗಿತ್ತು. ಜೀವನದ ಪ್ರಕ್ರಿಯೆಗೆ ಶರಣಾಗಲು ಮತ್ತು ಹೆಚ್ಚು ನಂಬಿಕೆ ಇಡಲು ಕಲಿಯುತ್ತಿದ್ದೇನೆ. ಲೈಟ್ ಚಾನೆಲಿಂಗ್ ನಿಜವಾಗಿಯು ಇಲ್ಲಿ ಸಹಾಯ ಮಾಡುತ್ತದೆ!

– ಶ್ರಿಯಾ ಶಶಾಂಕ್, ಲೈಟ್ ಚಾನೆಲ್

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಜೋಸ್ಕೊ ಪ್ರಿಂಟರ್ಸ್, ರಾಮಮೂರ್ತಿನಗರ, ಬೆಂಗಳೂರು – 560 016.
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ